www.prepp.in

Prepp
Your Personal Exams Guide

UPSC CSE 2019 MAINS PAPER A SEPTEMBER 28, 2019 KANNADA COMPULSORY LANGUAGE QUESTION PAPER

SDF-C-KND

# ಕನ್ನಡ / KANNADA

## (ಕಡ್ಡಾಯ ಪತ್ರಿಕೆ) / (COMPULSORY)

| | |
|---|---|
| ವೇಳೆ : **ಮೂರು** ಗಂಟೆ | ಗರಿಷ್ಠ ಅಂಕಗಳು : **300** |
| *Time Allowed : **Three** Hours* | *Maximum Marks : **300*** |

### ಪ್ರಶ್ನೆ ಪತ್ರಿಕೆ ನಿರ್ದಿಷ್ಟ ಸೂಚನೆಗಳು

**ಪ್ರಶ್ನೆಗಳನ್ನು ಉತ್ತರಿಸುವ ಮುನ್ನ ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಎಚ್ಚರಿಕೆಯಿಂದ ಓದಿರಿ :**

ಎಲ್ಲಾ ಪ್ರಶ್ನೆಗಳನ್ನೂ ಉತ್ತರಿಸಬೇಕು.

ಪ್ರಶ್ನೆ/ಪ್ರಶ್ನೆಯ ಭಾಗಗಳಿಗೆ ಅನ್ವಯವಾಗುವ ಅಂಕಗಳನ್ನು ಅವುಗಳ ಎದುರಿಗೆ ಕೊಡಲಾಗಿದೆ.

ಉತ್ತರಗಳನ್ನು ಪ್ರಶ್ನೆಯಲ್ಲಿ ಸೂಚಿಸದ ಹೊರತು, **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಎಲ್ಲೆಲ್ಲಿ ಪ್ರಶ್ನೆಗಳಲ್ಲಿ ಪದಗಳ ಮಿತಿಯನ್ನು ಸೂಚಿಸಲಾಗಿದೆಯೋ ಆ ಸೂಚನೆಯನ್ನು ಪಾಲಿಸಬೇಕು. ಪದಗಳ ಮಿತಿ ಸೂಚಿಸಿದ್ದಕ್ಕಿಂತ ಹೆಚ್ಚು ಅಥವಾ ಕಡಿಮೆಯಾದಲ್ಲಿ ಅಂಕಗಳನ್ನು ಕಡಿತಗೊಳಿಸಲಾಗುವುದು.

ಯಾವುದಾದರೂ ಪುಟ ಅಥವಾ ಪುಟದ ಭಾಗವನ್ನು ಪ್ರಶ್ನೆ ಸಹಿತವಾದ ಉತ್ತರ ಪತ್ರಿಕೆಯಲ್ಲಿ ಖಾಲಿ ಬಿಟ್ಟಲ್ಲಿ, ಆ ಜಾಗವನ್ನು ಸ್ಪಷ್ಟವಾಗಿ ಪೆನ್ನಿನಿಂದ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*All questions are to be attempted.*

*The number of marks carried by a question / part is indicated against it.*

*Answers must be written in **KANNADA (Kannada script)** unless otherwise directed in the question.*

*Word limit in questions, wherever specified, should be adhered to and if answered in much longer or shorter than the prescribed length, marks may be deducted.*

*Any page or portion of the page left blank in the Question-cum-Answer Booklet must be clearly struck off.*

www.prepp.in

Prepp
Your Personal Exams Guide

**Q1.** ಕೆಳಕಂಡ ಯಾವುದಾದರೂ ಒಂದು ವಿಷಯದ ಬಗ್ಗೆ 600 ಪದಗಳ ಮಿತಿಯೊಳಗೆ ಪ್ರಬಂಧ ಬರೆಯಿರಿ. *100*

(a) ಸೃಜನಶೀಲತೆಯನ್ನು ಪೋಷಿಸುವ ಶಿಕ್ಷಣದ ಅಗತ್ಯ

(b) ಭಾರತದಲ್ಲಿ ವನ್ಯ ಜೀವಿ ಸಂರಕ್ಷಣೆಯ ಸವಾಲುಗಳು

(c) ಯುವ ಜನಾಂಗದ ಮೇಲೆ ಚಲನ ಚಿತ್ರಗಳ ಪರಿಣಾಮ

(d) ವಿದ್ಯಾಂಗನೆಯರ ಸಬಲೀಕರಣ

**Q2.** ಈ ಗದ್ಯ ಪಠ್ಯವನ್ನು ಓದಿ ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ನಿಮ್ಮದೇ ಭಾಷೆಯಲ್ಲಿ ಉತ್ತರಿಸಿ. ನಿಮ್ಮ ಉತ್ತರಗಳು ನೇರ, ಸ್ಪಷ್ಟ ಸರಳ ಮತ್ತು ಸಂಕ್ಷಿಪ್ತವಾಗಿರಲಿ : *12×5=60*

ಈಚಿನ ಹಲವು ಸಾವಿರ ವರುಷಗಳವರೆಗೆ ಮಾನವ ಭೂಮಿಯ ಮೇಲೆ ಕೇವಲ ಬೇಟೆಗಾರನಾಗಿದ್ದ. ನವ ಶಿಲಾಯುಗ (ನಿಯೋಲಿತಿಕ್ ಕಾಲ) ದಿಂದೀಚೆಗಷ್ಟೇ ಆತ ಬೇಸಾಯದಲ್ಲಿ ನೆಲೆಗೊಂಡ. ತನ್ನ ಆಹಾರ ಹುಡುಕಿಕೊಂಡು ಎಲ್ಲಾ ಕಡೆ ಸುತ್ತಾಡುವ ಬದಲು ಮಣ್ಣನ್ನು ಪೋಷಿಸುವುದರ ಮೂಲಕ ಆತನಿಗೆ ಆಹಾರ ದಾಸ್ತಾನನ್ನು ಹೆಚ್ಚಿಸಲು ಸಾಧ್ಯವಾಯಿತು. ಆತನು ಭೂಮಿ ವ್ಯವಸಾಯದ ಸುಧಾರಣೆ ಮಾಡುತ್ತಲೇ ಇದ್ದಾನೆ. ಮಣ್ಣಿನಿಂದ ಹೆಚ್ಚು ಗುಣಾತ್ಮಕವಾದ ಇಳುವರಿ ಪಡೆಯುವುದು ಸಾಧ್ಯವಾಗಿದೆ. ಆದರೆ ಕಡಲಿನ ಬಗ್ಗೆ ಮಾತಾಡುವುದಾದರೆ, ಈಗಲೂ ಆತ ಬೇಟೆಗಾರನೇ. ಆತ ಮೀನು ಮತ್ತು ಬೇರೆ ಕಡಲ-ಜೀವಿಗಳನ್ನು ಹಿಡಿಯುತ್ತಾನೆಯೇ ಹೊರತು ಕಡಲ-ಪ್ರಾಣಿಗಳ ಕೃಷಿ ಮತ್ತು ಅವುಗಳ ನಿರಂತರ ಸರಬರಾಜಿನ ಬಗ್ಗೆ ಜಾಸ್ತಿ ಏನೂ ಮಾಡಲಾಗಿಲ್ಲ. ಈವರೆಗೆ ಅಂತರ್ಜಲ ಬೇಟೆ ಆತನಿಗೆ ಹೆಚ್ಚು ಹೆಚ್ಚು ಪೋಷಕಾಂಶದ ಪ್ರೋಟೀನ್ ತಂದಿಕ್ಕಿದೆ ಭೂಮಿ-ಕೃಷಿಯಿಂದ ಒದಗಿ ಬರುವ ಪ್ರೋಟೀನಿಗೆ ಇದು ಪೂರಕವಾಗಿದೆ ಆದರೆ ಕಡಲ-ಜೀವಿ ಆಹಾರದ ಇಳುವರಿ ಈಗ ಸಾಕಷ್ಟಾಗಿದ್ದರೂ, ಕಡಲ-ಜೀವಿ ಆಹಾರದ ಅಂತಸ್ಥ ವ್ಯಾಪ್ತಿಯನ್ನು ಸಾಧಿಸಲಾಗಿಲ್ಲ. ಕಡಲ-ಜೀವಿ ಕೃಷಿಯ ಯಾವುದಾದರೂ ಬಗೆಯಿಂದ ಇನ್ನೂ ಹೆಚ್ಚಿನ ಪೋಷಕಾಂಶ ಸಿಗುವಂತೆ ಆತ ಮಾಡದಿದ್ದರೆ ಜಗತ್ತಿನ ಜನಸಂಖ್ಯೆಯ ನಾಗಾಲೋಟದ ಕಾರಣದಿಂದ ಕಡಲ-ಜೀವಿಗಳಿಂದ ಒದಗಿ ಬರಬಹುದಾದ ಪೋಷಕಾಂಶದ ಸರಬರಾಜು ಕೊನೆಗಾಣುವ ಅಪಾಯ ಇದೆ.

www.prepp.in

Prepp
Your Personal Exams Guide

ವಿಶೇಷವಾಗಿ ಜಲ-ವಿದ್ಯುತ್ ಯೋಜನೆಗಳಿಗೋಸ್ಕರ ಕಟ್ಟಲಾಗುವ ಅಣೆಕಟ್ಟುಗಳಿಂದ ಉಂಟಾಗುವ ಕೃತಕ ಕೆರೆಗಳಲ್ಲಿ ಮತ್ತು ಮೀನು-ಕೊಳಗಳಲ್ಲಿ, ಕೆರೆಗಳಲ್ಲಿ ಸಣ್ಣ ಪ್ರಮಾಣದಲ್ಲಿ ಮೀನು-ಬೇಸಾಯವನ್ನು ಯಶಸ್ವಿಯಾಗಿ ಮಾಡಲಾಗಿದೆ. ಕೃಷಿ-ಅಧಿಕಾರಿಗಳ ಸಹಾಯದಿಂದ ಹಳ್ಳಿ-ಸಮುದಾಯಗಳಲ್ಲಿ ಕಟ್ಟಲಾದ ಮೀನು-ಕೊಳಗಳ ಮೀನುಗಳ ಇಳುವರಿಯಿಂದ ಪ್ರೋಟೀನ ಸರಬರಾಜು ಈಗಾಗಲೇ ಹೆಚ್ಚಾಗಿದೆ.

ಸಣ್ಣ ವಯಸ್ಸಿನ ಎಳೆ ಮೀನುಗಳು ಮೀನು-ಕೊಳಗಳಲ್ಲಿ ಸಾಕಟ್ಟು ಪ್ರಮಾಣದಲ್ಲಿ ಇವೆ. ಬೆಳೆಯಲು ಅವುಗಳಿಗೆ ಆರೋಗ್ಯದಾಯಕ ಪರಿಸರ ಒದಗಿಸುವುದು ಮತ್ತು ಒಳ್ಳೆಯ ಆಹಾರ ಒದಗಿಸುವುದು ಕಷ್ಟವೇನಲ್ಲ. ಜಲ-ಜೀವಿಗಳ ಆಹಾರದ ತಳಹದಿಯು ನೀರನಲ್ಲಿ ತೇಲುವ ಬಹಳ ಸಣ್ಣ ಗಾತ್ರದ 'ಪ್ಲೇಂಕ್ಟೋನ್' ಎಂಬ ಮೀನುಗಳು ಮತ್ತು ಗಿಡಗಳು. ಸಣ್ಣ ಮೀನುಗಳು ಇದನ್ನು ತಿನ್ನುತ್ತವೆ ಮತ್ತು ಈ ಸಣ್ಣ ಮೀನುಗಳೇ ದೊಡ್ಡ ಮೀನುಗಳ ಆಹಾರವಾಗುತ್ತವೆ. ನೀರಿನಲ್ಲಿರುವ ಕೆಲವು ಖನಿಜಾಂಶಗಳನ್ನು ಪ್ಲೇಂಕ್ಟೋನ್ ಅವಲಂಬಿಸಿರುವುದರಿಂದ ಇದರ ಪ್ರಮಾಣವನ್ನು ನೀರಿಗೆ ಗೊಬ್ಬರ ಹಾಕುವುದರಿಂದ ಹೆಚ್ಚಿಸಬಹುದು.

ಆದರೆ ಕಡಲ-ಕೃಷಿ ಮಾಡಲಾಗಬೇಕಾದರೆ (feasible) ಮತ್ತು ಲಾಭದಾಯಕವಾಗಬೇಕಾದರೆ ಹಲವು ಸಮಸ್ಯೆಗಳನ್ನು ಬಗೆ ಹರಿಸಬೇಕಾಗುತ್ತದೆ. ಉದಾಹರಣೆಗೆ ಹಲವು ಮೈಲುಗಳ ಅನುತ್ಪಾದಕ ನೀರ ಹರಿವೆಗೆ ಕಡಲ-ಸೆಳೆತಗಳು ಚದುರಿಸಿದರೆ, ಆ ಕಡಲ-ಭಾಗವನ್ನು ಗೊಬ್ಬರದಿಂದ ಸಮೃದ್ಧಗೊಳಿಸುವುದರಲ್ಲಿ ಅರ್ಥ ಇಲ್ಲ. ಆತನದೇ ಆದ ಸಣ್ಣ ಕಡಲ-ಭಾಗಕ್ಕೇ ಗೊಬ್ಬರಗಳನ್ನು ಮೀನು-ಕೃಷಿಕ ಸೀಮಿತಗೊಳಿಸಲು ಆದರೆ, ಆತ ಪೊರೆಯುತ್ತಿರುವ ಮೀನುಗಳನ್ನು ಅದೇ ಸೀಮಿತ ತಾಣಕ್ಕೆ ಕೂಡಿ ಹಾಕುವುದು ಸವಾಲೇ ತಾನು ಮಾಡಿದ ಖರ್ಚಿನ ಗರಿಷ್ಠ ಪ್ರತಿಫಲಕ್ಕೋಸ್ಕರ ತಾನು ಸಾಕುತ್ತಿರುವ ಮೀನುಗಳಿಗೆ ಈ ಗೊಬ್ಬರ ಆಹಾರವನ್ನು ತಲುಪುವಂತೆ ಮಾಡುವುದಕ್ಕೆ ಆತ ದಾರಿ ಕಂಡುಕೊಳ್ಳ ಬೇಕಾಗುತ್ತದೆ. ಇದರ ಅರ್ಥ ಒಂದು ಬಗೆಯ ಕಳೆ-ಕೀಳುವುದು? ಅಂದರೆ ತನ್ನ ಮೀನುಗಳೊಂದಿಗೆ ತಾ ಕೊಟ್ಟ ಆಹಾರ ಬೇರೆ ನೀರ-ಪ್ರಾಣಿಗಳು ಹಂಚಿಕೊಳ್ಳದ ಹಾಗೆ ಬೇರೆ ನೀರ-ಪ್ರಾಣಿಗಳನ್ನು ಕಿತ್ತೊಗೆಯುವುದು.

www.prepp.in

ಕಡಲು ಇಳೆಯ ನಾಲ್ಕನೇ ಮೂರು ಭಾಗವನ್ನು ಆವರಿಸಿದೆಯೆಂದು ನೆನಪಿಟ್ಟುಕೊಂಡರೆ ಈ ತೊಡಕುಗಳನ್ನು ಬಗೆ ಹರಿಸುವುದು ಸುಲಭವಲ್ಲ ಎಂಬುದು ಸ್ಪಷ್ಟವಾಗುತ್ತದೆ. ಕಡಲ ನೀರು ಕೊಳಗಳ ಮತ್ತು ಕೆರೆಗಳ ನೀರಿನಂತಲ್ಲ. ಅದು ಎಂದೂ ಸೆಳೆತಗಳಲ್ಲಿ, ಕರೆಂಟಾಗಳಲ್ಲಿ ಹರಿಯುತ್ತಿರುತ್ತದೆ. ಕಾಲಕ್ರಮೇಣ ಈ ತೊಡಕುಗಳು ಬಗೆ ಹರಿಯುವುದು ಸಂಭವನೀಯ. ಭೂಖಂಡಗಳ ಹತ್ತಿರದಲ್ಲಿ ಹೆಚ್ಚು ಆಳವಲ್ಲದ ತೀರದ ಹತ್ತಿರದ ನೀರಿನ ಮೀನು-ಕೃಷಿಯನ್ನು ಮಾನವನು ಸಣ್ಣ ಪ್ರಮಾಣದಲ್ಲಿ ಭವಿಷ್ಯದಲ್ಲಿ ತೊಡಗಿಸಬಹುದು. ಆಗ ಆ ಜಾಗವನ್ನು ಆತ ತಾನು ಸಾಕುವ ನಿರ್ದಿಷ್ಟ ಮೀನು-ಜಾತಿಗಳಿಂದ ತುಂಬಬಹುದು. ಬೇಕಾಗದ ಜಲಚರ ಜೀವಿಗಳನ್ನು ತೆಗೆದು ಹಾಕಬಹುದು, ಬೇಕಾದಾಗ ಗೊಬ್ಬರದಿಂದ ಸಮೃದ್ಧಗೊಳಿಸಬಹುದು. ಹಾಗೂ ಕೊನೆಗೆ ಬೆಳೆದ ಮೀನುಗಳ ಸುಗ್ಗಿಯನ್ನು ತನ್ನದಾಗಿಸಿಕೊಳ್ಳಬಹುದು.

(a) ಬೇಟೆ ಆಡುವುದಕ್ಕೆ ಹೋಲಿಸಿದರೆ ಕೃಷಿಯ ಲಾಭದಾಯಕ ಅನುಕೂಲ ಏನು ? ಕಡಲ-ಕೃಷಿ ಮುಂದಿನ ದಿನಗಳಲ್ಲಿ ಯಾಕೆ ಅಗತ್ಯವಾಗಬೇಕು ? *12*

(b) ಮೀನು-ಕೃಷಿಯಲ್ಲಿ ಗೊಬ್ಬರಗಳ ಪಾತ್ರ ಏನು ? *12*

(c) ಕಡಲಿನ ಯಾವ ಭಾಗದಲ್ಲಿ ಮೀನು-ಕೃಷಿ ಶುರು ಮಾಡಬಹುದು ? *12*

(d) 'ಕಳೆ-ಕೀಳುವುದು' ಅಂದರೇನು ? *12*

(e) ಮುಂದಿನ ದಿನಗಳಲ್ಲಿ ಕಡಲ-ಕೃಷಿಯ ತೊಡಕುಗಳನ್ನು ಹೇಗೆ ಬಗೆ ಹರಿಸಬಹುದು ? *12*

**Q3. ಕೆಳಕಂಡ ಪಠ್ಯವನ್ನು ಅದರ ಮೂರನೇಯ ಒಂದು ಭಾಗಕ್ಕೆ ಮೀರದಂತೆ ಸಂಗ್ರಹಿಸಿ ನಿಮ್ಮದೇ ಆದ ಪದಗಳಲ್ಲಿ ಬರೆಯಿರಿ. ತಲೆಬರಹ ಕೊಡುವ ಅಗತ್ಯ ಇಲ್ಲ.** ***60***

ಎಲ್ಲರೂ ಆರಿಸುವ ಸಮಾನ ಮತ್ತು ಎಲ್ಲರನ್ನೊಳಗೊಂಡ ಅಭಿವೃದ್ಧಿಯ ಗುರಿಯ ಸಾಧನೆ ಭಾರತದ ಹಳ್ಳಿ-ಸಮುದಾಯದ ಗಾತ್ರವನ್ನು ಮನಸ್ಸಿನಲ್ಲಿಟ್ಟುಕೊಂಡು ಅದರ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳ, ಅವುಗಳ ಬದುಕಿನ ಗುಣ ಮಟ್ಟದ ಮತ್ತು ಗ್ರಾಮೀಣ ಮೂಲಭೂತ ಸೌಕರ್ಯಗಳ ಸರ್ವತೋಮುಖ ಪ್ರಗತಿಯನ್ನು ಬಯಸುತ್ತದೆ. ಗ್ರಾಮೀಣ

www.prepp.in

Prepp
Your Personal Exams Guide

ಮೂಲಭೂತ ಸೌಕರ್ಯಗಳ ವ್ಯವಸ್ಥೆಯ ಒಂದು ಸಾವಯವ ಭಾಗವು ಕುಡಿಯುವ ನೀರಿನ ವಿಪರ್ಾಡು. ನೀರು ಮಹತ್ವದ ಸಾರ್ವಜನಿಕ ವಸ್ತು ಎಂಬುದರ ಬಗ್ಗೆ ಎರಡು ಮಾತಿಲ್ಲ. ಪ್ರಜೆಗಳ ಆಗ್ರಹಪೂರ್ವಕ ಪಕ್ಕೊತ್ತಾಯಗಳನ್ನು ಪೂರೈಸಲು ನೀರಿನ ಮೂಲಭೂತ ಸೌಕರ್ಯ ಉಂಟುಮಾಡಲು ಹೆಚ್ಚುವರಿ ಸಾರ್ವಜನಿಕ ಹೂಡಿಕೆಯ ಅಗತ್ಯ ಇದೆ. ನೀರಿನ ಖಚಿತ ಮತ್ತು ನಿರಂತರ ಲಭ್ಯತೆ ಇರುವ ದೇಶವು ತನ್ನ ಪ್ರಜೆಗಳಿಗೆ ಸ್ವಚ್ಛ ನೀರನ್ನು ಒದಗಿಸುವುದರ ಜೊತೆಗೆ ಆರೋಗ್ಯವಂತ ಮತ್ತು ಆರ್ಥಿಕವಾಗಿ ಉತ್ಪಾದಕವಾದ ಸಮಾಜವನ್ನು ಖಾತರಿಗೊಳಿಸುತ್ತದೆ. ಆದರೆ ನೆಲೆಗೊಂಡ ಕುಡಿಯುವ ನೀರಿನ ಪೂರೈಕೆಯ ಸಾಮರ್ಥ್ಯಗಳ ಕೊರತೆಯಿಂದ, ಸಾಮಾಜಿಕ-ಆರ್ಥಿಕ ವೃದ್ಧಿಯ ಕೊರತೆಯಿಂದ, ಶಿಕ್ಷಣದ ಕೊರತೆಯಿಂದ, ನೀರಿನ ಬಳಕೆ ಮತ್ತು ಸಿಗುವ ಸಾಧ್ಯತೆಯ ಅರಿವಿನ ಕೊರತೆಗಳಿಂದಾಗಿ ದೊಡ್ಡ ಸಂಖ್ಯೆಯ ಭಾರತದ ಗ್ರಾಮೀಣ ಜನರ ಕುಡಿಯುವ ನೀರಿನ ಅಗತ್ಯದ ಪೂರೈಕೆಯು ಧೃತಿಗೆಡಿಸುವ ಸವಾಲೇ.

ಭಾರತದ ಸಂವಿಧಾನದ 47 ನೆಯ ಪರಿಚ್ಛೇದವು ಸುರಕ್ಷಿತ ಕುಡಿಯುವ ನೀರಿನ ಪೂರೈಕೆಯನ್ನು ರಾಜ್ಯಗಳಿಗೆ ಆದೇಶಿಸುತ್ತದೆ. ಕುಡಿಯುವ ನೀರಿನ ಸರಬರಾಜಿನ ಬಗೆಗಿರುವ ಈ ನಮೂದು ರೋಗಗಳನ್ನು ಮತ್ತು ಸಾವುಗಳನ್ನು ಗಣನೀಯವಾಗಿ ಕಡಿಮೆ ಮಾಡಿ ದೇಶದ ಕೋಟಿ ಜನರ ಒಟ್ಟಾರೆ ಆರೋಗ್ಯವನ್ನು ಸುಧಾರಿಸುತ್ತದೆ.

ದೀರ್ಘಕಾಲ ಮುಂದುವರಿಸಲು ಸಾಧ್ಯವಾಗಬಹುದಾದ ಅಭಿವೃದ್ಧಿಯು ಲಭ್ಯತೆ ಮತ್ತು ನೀರಿನ ಮತ್ತು ನಿರ್ಮಲೀಕರಣದ ವ್ಯವಸ್ಥೆಗಳ ದೀರ್ಘಕಾಲ ಉಳಿಯುವಂಥಾ ನಿರ್ವಹಣೆಗಳನ್ನು ಖಚಿತ ಪಡಿಸುವ ಮಹತ್ವಕ್ಕೆ ಒತ್ತು ಕೊಡುತ್ತದೆ. ಇದು ಸುರಕ್ಷಿತ ಕುಡಿಯುವ ನೀರಿನ ಲಭ್ಯತೆಯ ಮುಖಾಂತರ ಯಾರನ್ನೂ ಹಿಂದೆ ಬಿಡದೆ ಹಾಗೆ ನೋಡಿಕೊಳ್ಳುವ ದಾರಿ 22 ಮಾರ್ಚ್ ರಂದು ಆಚರಿಸಲಾಗುವ 'ಜಗತ್ತಿನ ನೀರಿನ ದಿನ' ದ ವಿಷಯವೂ ಇದೇ ಆಗಿದೆ.

ಸರಕಾರವು ಗ್ರಾಮೀಣ ಜನತೆಗೆ ಕುಡಿಯುವ ನೀರಿನ ಲಭ್ಯತೆಯನ್ನು ಖಾತ್ರಿಗೊಳಿಸುವುದರ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿದೆ. ಈ ನಿಟ್ಟಿನ ಸವಾಲುಗಳನ್ನು ಎದುರಿಸಲು ಗುರುತರವಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗ್ರಾಮೀಣ ನೀರಿನ ಪೂರೈಕೆಯ

ಯೋಜನೆಗಳಿಗೆ ಹಣಕಾಸಿನ ನೆರವನ್ನು ಒದಗಿಸಲಾಗಿದೆ. ನಿರ್ವಹಣೆ ಮತ್ತು ನಡೆಸಿಕೊಂಡು ಹೋಗುವ ಅಂಶಗಳ ಜೊತೆಗೆ ಅಂತರ್ಜಲ ತುಂಬಿಕೊಡುವ ಕ್ರಮಗಳನ್ನು ಜರುಗಿಸಲಾಗಿದೆ. ಕೈಗೊಳ್ಳಬಹುದಾದಂಥ ದೀರ್ಘಕಾಲದ ಇತರೆ ಕ್ರಮಗಳಲ್ಲಿ ಮುಂದುವರಿಸಿಕೊಂಡು ಹೋಗಬಹುದಾದ ಸುರಕ್ಷಿತ ಕುಡಿಯುವ ನೀರಿನ ಪೂರೈಕೆಯಲ್ಲಿ ನೆರವು ನೀಡಬಹುದಾದ ಮೊದಲ ಹೆಜ್ಜೆಗಳಲ್ಲಿ ಮಳೆ ನೀರು ಕೊಯ್ಲು ಸೇರಿದೆ. ಸರಕಾರವು ಕೃತಕವಾಗಿ ಅಂತರ್ಜಲ ಮರು ಚಾರ್ಜ ಮಾಡುವ ಮತ್ತು ಮಳೆನೀರು ಕೊಯ್ಲಿನ ಮಾಸ್ಟರ್-ಯೋಜನೆ ಮೇಲೆ ಕೆಲಸ ನಡೆಸಿದೆ. ನಮ್ಮ ಸನಾತನ ಪಾರಂಪರಿಕ ಅರಿವು ಮತ್ತು ವಿವೇಕದಿಂದ ಸ್ಫೂರ್ತಿ ಪಡೆಯುವ ಅಂಶಗಳು ಭಾರತದಲ್ಲಿ ಹಲವಿವೆ. 2001 ರಲ್ಲಿ ತಮಿಳುನಾಡು ಸರ್ಕಾರದ ಪ್ರತಿಮನೆಯಲ್ಲೂ ಮಳೆನೀರು ಕೊಯ್ಲಿನ ಮೂಲಭೂತ ಸೌಕರ್ಯವನ್ನು ಕಡ್ಡಾಯ ಮಾಡಿತು. ಮಳೆ ನೀರಿನ ಕೊಯ್ಲನ್ನು ಕಡ್ಡಾಯ ಮಾಡುವ ಪ್ರಯೋಗವನ್ನು ಬೆಂಗಳೂರಿನಲ್ಲೂ, ಪುಣೆಯಲ್ಲೂ ಮಾಡಲಾಗಿದೆ. ಬೇರೆ ರಾಜ್ಯಗಳಲ್ಲೂ ಈ ಬಗೆಯ ಮೊದಲ ಹೆಜ್ಜೆಯನ್ನು ಇಡಲಾಗಿದೆ.

ಅಂತರ್ಜಲದ ಬಳಕೆ ಭಾರತದ ಮುಖ್ಯ ಕಾಳಜಿಗಳಲ್ಲೊಂದು. ರಾಜ್ಯ ಸರ್ಕಾರಗಳು ಇದನ್ನು ಸರಿನೋಡುವ, ತಾಳೆ ನೋಡುವ, ನಿಯಂತ್ರಕ ವ್ಯವಸ್ಥೆಗಳನ್ನು ಉಂಟುಮಾಡುವ ಮತ್ತು ಕುಡಿಯುವ ನೀರಿನ ಪೂರೈಕೆಯ ಕಾರ್ಯಯೋಜನೆಗಳನ್ನು ಕ್ರಿಯಾತ್ಮಕವಾಗಿಸುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಇನ್ನೂ ಹೆಚ್ಚಿನ ಪಾಲ್ಗೊಳ್ಳವಿಕೆಯ ಅಗತ್ಯ ಇದೆ. ಈಗ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಕನಿಷ್ಠ ಮಟ್ಟದಲ್ಲಿದೆ. ಗ್ರಾಮೀಣ ಸಮುದಾಯಗಳು ಎನ್.ಜಿ.ಓ. ಗಳು ಮತ್ತು ಅನುಕೂಲಕಾರಕ ಮತ್ತು ಸಹ-ಆರ್ಥಿಕ ನೆರವುಗಾರನಾಗಿ ಸರಕಾರಗಳ ನಡುವಣ ಪಾಲುಗಾರಿಕೆ ಗೆಲುವು ಕಂಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಲಭ್ಯತೆ ಮತ್ತು ಹೆಚ್ಚಳ (access) ಗಳನ್ನು ಗಮನದಲ್ಲಿಟ್ಟುಕೊಂಡು ನೀರನ್ನು ಬಳಸಬೇಕು. ಹಳ್ಳಿ ಸಮುದಾಯ ದಳ ಸಕ್ರಿಯ ಪಾಲ್ಗೊಳ್ಳಿಕೆಯಾದ ನೀರನ್ನು ಮಿತವಾಗಿ ಮತ್ತು ವಿವೇಕಯುತವಾಗಿ ಬಳಸುವ ಅಗತ್ಯ ಇದೆ.

ಸಮುದಾಯದ ಪಾಲ್ಗೊಳ್ಳಿಕೆಯು ನಿರ್ವಹಣೆ ಮತ್ತು ನಿಡುಗಾಲ ಮುಂದುವರೆಸಿಕೊಂಡು ಹೋಗುವ ಆರ್ಥಿಕ ವ್ಯಾವಹಾರ್ಯತೆಯನ್ನು ಬೆಳೆಸುತ್ತದೆ.

www.prepp.in

Prepp
Your Personal Exams Guide

ಸಹಜವಾಗಿ ಸೇರಿಕೊಂಡಿರುವ ಸಮುದಾಯ ಸೇರ್ಗೊಳ್ಳುವಿಕೆ (belongingness) ಯಿಂದಾಗಿ ಹೆಚ್ಚಿನ ಪೋಷಣೆ ಒದಗಿಸಿ ಅಂಥಾ ವ್ಯವಸ್ಥೆಯ ವಯಸ್ಸನ್ನು ಹೆಚ್ಚಿಸುತ್ತದೆ. ಕುಡಿಯುವ ನೀರಿನ ಮೂಲದಾಣಗಳ ಸನಿಹ ಆರೋಗ್ಯದಾಯಕ ಸ್ವಚ್ಛತೆ ಕಾಪಾಡಿಕೊಂಡು ಹೋಗುವುದಲ್ಲದೇ, ನೀರಿನ ಸಂಗ್ರಹಣೆ ಮತ್ತು ಬಳಕೆಯಲ್ಲಿ ಮಲಿನತೆ ತಪ್ಪಿಸಲು ಸಮುದಾಯದ ಪಾತ್ರ ನೀರನ್ನು ಸಂಗ್ರಹಿಸಿಡುವ ಕ್ರಮಗಳ ಸುಧಾರಣೆಯಲ್ಲಿದೆ.

ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ, ಸ್ವ ಸಹಾಯ ಗುಂಪುಗಳ ಮೂಲಕ ಮತ್ತು ಗ್ರಾಮಿಣ ಸಹಕಾರಿ ಸಂಘಗಳ ಮೂಲಕ ನಿಡುಗಾಲ ಮುಂದುವರೆಸಿಕೊಂಡು ಹೋಗಬಹುದಾದ ನಡುಗಾಲದ ಪರಿಹಾರಗಳನ್ನು ಕಂಡುಹಿಡಿದು 2030 ರ ವೇಳೆಗೆ 'ಪ್ರತಿ ಮನೆಗೆ ನೀರು' ಎಂಬುದನ್ನು ನಿಜಗೊಳಿಸಲು ಈ ಕಾರ್ಯ ಯೋಜನೆಗಳ ಪರಿಣಾಮಕಾರಿ ಅನುಸ್ಠಾನವು ಸಮುದಾಯದ ಕ್ರಿಯಾತ್ಮಕ ಕಾರ್ಯ ತತ್ಪರತೆಯನ್ನು ಬಯಸುತ್ತದೆ.

(433 ಶಬ್ದ)

**Q4.** **ಕೆಳಕಂಡ ಪಠ್ಯವನ್ನು ಇಂಗ್ಲೀಷಿಗೆ ಅನುವಾದಿಸಿರಿ :** ***20***

ವ್ಯಕ್ತಿ ತನ್ನನ್ನು ತಾನೇ ನೋಡುವಾಗ ತನ್ನನ್ನು ತಪ್ಪಾಗಿ ಅರ್ಥಿಸುತ್ತಾನೆ. ಆತ ಕೇವಲ ತನ್ನ ಉದ್ದೇಶಗಳನ್ನು ನೋಡುತ್ತಾನೆ. ಬಹುತೇಕ ಜನರು ಒಳ್ಳೆಯ ಉದ್ದೇಶಗಳನ್ನು ಹೊಂದಿರುತ್ತಾರೆ. ಆದ್ದರಿಂದ ತಾವು ಮಾಡುವುದೆಲ್ಲಾ ಒಳ್ಳೆಯದ್ದನ್ನಾಗಿಸುತ್ತದೆ ಎಂಬ ನಿಲುವನ್ನು ತಾಳುತ್ತಾರೆ. ಆತನ ಒಳ್ಳೆಯ ಉದ್ದೇಶಗಳಿಗೆ ವ್ಯತಿರಿಕ್ತವಾಗಿರಬಹುದಾದ, ಪದೇ ಪದೇ ವ್ಯತಿರಿಕ್ತವಾಗಿರುವ, ಕ್ರಿಯೆಗಳನ್ನು ವಸ್ತು ನಿಷ್ಠವಾಗಿ ತೀರ್ಮಾನಿಸಲು ಕಷ್ಟವಾಗುತ್ತದೆ. ಬಹುತೇಕ ಜನರು ಕೆಲಸ ಮಾಡುವ ಉದ್ದೇಶದಿಂದ ಕೆಲಸದಲ್ಲಿ ತೊಡಗುತ್ತಾರೆ. ಅವರಲ್ಲಿ ಬಹಳ ಜನ ತಮಗೆ ಅನುಕೂಲವಾಗುವ ಪರಿಯಲ್ಲಿ ಕೆಲಸಗೈದು ಅವರು ತಮ್ಮ ತೃಪ್ತಿಯ ಭಾವನೆಯೊಡಗೂಡಿ ಸಂಜೆ ಮನೆಗೆ ತೆರಳುತ್ತಾರೆ. ಕೆಲಸ-ನಿರ್ವಹಣೆಯ ಮೌಲ್ಯ-ಮಾಪನ ಮಾಡುವುದಿಲ್ಲ, ಕೇವಲ ತಮ್ಮ ಮಾನಸಿಕ ಉದ್ದೇಶಗಳ ಬೆಲೆ ಕಟ್ಟುವ ಕೆಲಸ ಮಾಡುತ್ತಾರೆ. ತಡವಾಗಿದ್ದರೆ, ನಿಗದಿತ ಸಮಯದೊಳಗೆ ಕೆಲಸ ಮುಗಿಸುವ ಉದ್ದೇಶದಿಂದ ಕೆಲಸ ಮಾಡಿರುವುದರಿಂದ, ತನ್ನ ನಿಯಂತ್ರಣದ ಹೊರಗಿನ ಕಾರಣಗಳಿಗೆ ಎಂದು ಅಂದುಕೊಳ್ಳುತ್ತಾನೆ. ಆತನಿಗೆ ತಡ ಮಾಡುವ ಉದ್ದೇಶ ಇರಲಿಲ್ಲ ಎಂದಂದುಕೊಳ್ಳುತ್ತಾನೆ. ಆದರೆ ಆತನ ಮಾಡಿದ ಕೆಲಸ ಅಥವಾ ಮಾಡದ ಕೆಲಸ ತಡಕ್ಕೆ ಕಾರಣವಾಗಿದ್ದರೆ, ಅದು ಉದ್ದೇಶ ಪೂರ್ವಕವಲ್ಲವೆ ?

Prepp
Your Personal Exams Guide

ಇಲ್ಲಿ ಸಮಸ್ಯೆ ಎಂದರೆ ನಾವು ಬದುಕನ್ನು ನೇರವಾಗಿ ಎದುರಿಸಿ ನಿರ್ವಹಿಸುವ ಬದಲು ಕೇವಲ ವಿಶ್ಲೇಷಿಸುವುದರಲ್ಲೇ ತೊಡಗುತ್ತೇವೆ. ಜನರು ಕಾರ್ಯ-ಕಾರಣ ತಿಳಿಯಲು ಸೋಲುಗಳನ್ನು ಒಡೆದು ಸೂಕ್ಷ್ಮವಾಗಿ ಪರೀಕ್ಷಿಸುತ್ತಾರೆ. ಆದರೆ ನೇರವಾಗಿ ಎದುರಿಸದೆ ಎದುರಿಸಿ ಅನುಭವ ಪಡೆದು ಅದರ ಪ್ರಭುತ್ವ ಗಳಿಸಲು ಯತ್ನಿಸುವುದಿಲ್ಲ. ಪ್ರಭುತ್ವ ಪಡೆದು ಅದು ಪುನರಾವರ್ತಿಸದಂತೆ ಮಾಡಹೋಗುವುದಿಲ್ಲ. ಕಷ್ಟಗಳ ಮೂಲಕ, ಸಮಸ್ಯೆಗಳ ಮೂಲಕ ದೇವರು ನಮಗೆ ಬೆಳೆಯಲು ಅವಕಾಶಗಳನ್ನು ಕಲ್ಪಿಸುತ್ತಾನೆ. ನಿಮ್ಮ ಆಸೆ ಆಕಾಂಕ್ಷೆಗಳು, ಕನಸುಗಳು, ಗುರಿಗಳು ನುಚ್ಚುನೂರಾದಾಗ ಭಗ್ನಾವಶೇಷಗಳಲ್ಲಿ ಹುಡುಕಿ ? ವಿನಾಶದಲ್ಲಿ ನಿಮಗೆ ಹುದುಗಿರುವ ಬಂಗಾರದ ಸದಾವಕಾಶ ಸಿಗಬಹುದು ?

ಕಾರ್ಯನಿರ್ವಹಣೆಯನ್ನು ಉತ್ತಮಗೊಳಿಸಲು, ಖಿನ್ನತೆಯನ್ನು ದೂರ ಮಾಡಲು ಜನರನ್ನು ಉತ್ತೇಜಿಸುವುದು ಯಾವಾಗಲೂ ಸವಾಲೇ. ಮುಂದಾಳು ವಿರೋಧ ಮತ್ತು ಸಮ್ಮತಿಗಳ ನಡುವೆ ಸಮತೋಲನ ಹುಡುಕುತ್ತಾನೆ.

**Q5.** **ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಅನುವಾದಿಸಿರಿ :** ***20***

Freedom has assuredly given us a new status and new opportunities. But it also implies that we should discard selfishness, laziness and all narrowness of outlook. Our freedom suggests toil and the creation of new values for old ones. We should so discipline ourselves as to be able to discharge our responsibilities satisfactorily. If there is any one thing that needs to be stressed, it is that we should put in action our full capacity, each one of us in productive effort — each one of us in his own sphere, however humble. Work, unceasing work, should now be our watchword. Work is wealth, and service is happiness. The greatest crime today is idleness. If we root out idleness, all our difficulties, including even conflicts, will gradually disappear. Whether as constable or high official of the state, whether as businessmen or industrialist, artisan or farmer, each one is discharging the obligation to the state, and making a contribution to the welfare of the country. Honest work is the anchor to which we should cling if we want to be saved from danger or difficulty. It is the fundamental law of progress.

www.prepp.in

Prepp
Your Personal Exams Guide

**Q6. (a)** **ಕೆಳಗಿನ ಪದಗಳನ್ನು ಕನ್ನಡದಲ್ಲಿ ಹೇಳಿ :** *2×5=10*

(i) ನಖಶಿಖಾಂತ *2*

(ii) ಅಜಗಜಾಂತರ *2*

(iii) ಕರಪತ್ರ *2*

(iv) ಸ್ನಾನಗೃಹ *2*

(v) ಶಿಶುವಿಹಾರ *2*

**(b)** **ಕೆಳಗಿನ ಪದಗಳನ್ನು ಒಡೆದು ಸಂಧಿರೂಪ ತಿಳಿಸಿ :** *2×5=10*

(i) ಚಿಕ್ಕವಳು *2*

(ii) ತುದಿಗಾಲು *2*

(iii) ಬೇರೆಯಾಗಿ *2*

(iv) ಮಹೇಶ್ವರ *2*

(v) ಊಟಿಯಲ್ಲಿ *2*

**(c)** **ಛಂದಸ್ಸಿನ ಈ ಕೆಳ ಗಣ ಪ್ರಶ್ನೆಗಳನ್ನು ಉತ್ತರಿಸಿ :** *2×5=10*

(i) ಗಣ ಎಂದರೇನು ? ಗಣಗಳ ಬಗೆಗಳನ್ನು ಹೆಸರಿಸಿ ? *2*

(ii) ಮಾತ್ರ ಎಂದರೇನು ? 'ಬಸವಣ್ಣ' ಪದದಲ್ಲಿ ಎಷ್ಟು ಮಾತ್ರಗಳಿವೆ ? *2*

(iii) ಅಂತ್ಯಪ್ರಾಸ ಎಂದರೇನು ? *2*

(iv) ಚಂಪೂ ಪದ್ಯ ಎಂದರೇನು ? *2*

(v) ಮಾತ್ರ್ಯಾರ್ದಶದ ಎರಡು ಉದಾಹರಣಗಳನ್ನು ಕೊಡಿ ? *2*

**(d)** **ಕೆಳಕಂಡ ಪದಗಳ ಪರ್ಯಾಯ ಸಮಾನಾರ್ಥ ಪದಗಳನ್ನು ಹೇಳಿ :** *2×5=10*

(i) ಪರಿಮಳ *2*

(ii) ಗುಡಿ *2*

(iii) ನುಡಿ *2*

(iv) ಕೈಕೊಡು *2*

(v) ವೆಚ್ಚ *2*